
ಸದಾಶಿವ ಟಾಯ್ಲೆಟ್ಟಿನೊಳಗೆ ಹೋಗಿ ಬಕೇಟಿಗೆ ನೀರು ಬಿಟ್ಟುಕೊಂಡು ಕೂತ ಮೂರೇ ನಿಮಿಷಕ್ಕೆ ಅಚ್ಯುತ ಬಾಗಿಲು ಬಡಿಯಲಾರಂಭಿಸಿದ್ದ. ಆಗಷ್ಟೇ ಬಿಡುಗಡೆಯ ತನ್ಮಯತೆಯಲ್ಲಿ ಮೆಲ್ಲನಿಳಿಯಲಾರಂಭಿಸಿದ್ದವನಿಗೆ ಡಬ್ ಡಬ್ ಸದ್ದು ಕೇಳಿ ಹಿಂದಿಂದ ಕುತ್ತಿಗೆಯ ಮೇಲೆ ಯಾರೋ ರಪ್ಪನೆ ಎಳೆದು ಬಾರಿಸಿದಂತಾಗಿ ಗಡಬಡಿಸಿ ಬಕೇಟಿಗೆ ಬೀಳುತ್ತಿದ್ದ ನೀರನ್ನು ಇನ್ನಷ್ಟು ಜೋರು ಮಾಡಿದ.

‘ಸದಾ... ಸದಾ... ಬೇಗ ಮುಗಿಸು ಮಾರಾಯಾ, ನಂಗೆ ಆಫೀಸಿಗೆ ಲೇಟ್ ಆಗ್ತಿದೆ...’ ಎಂದು ಜೋರು ದನಿಯಲ್ಲಿ ಕರೆದ ಅಚ್ಯುತ, ನಂತರ ಸಣ್ಣಗೆ ‘ನಾನೊಂದ್ಸಲ ಆಫೀಸಿಗೆ ಹೋದ ಮೇಲೆ ಎಷ್ಟೊತ್ತು ಬೇಕಾದ್ರೂ ಕೂತ್ಕೊಂಡಿರು. ನಡೀತದೆ ನಿಂಗೆ’ ಎಂದು ಗೊಣಗಿಕೊಂಡಿದ್ದೂ ಸದಾನ ಕಿವಿಗೆ ಸ್ಪಷ್ಟವಾಗಿಯೇ ಕೇಳಿಸಿತು. ಕೊನೆಯಲ್ಲಿ ಹೇಳಿದ ‘ನಡೀತದೆ’ ಎಂಬ ಶಬ್ದ ನಾನಾ ರೂಪ ತಾಳಿ ಅವನನ್ನು ಜಪ್ಪತೊಡಗಿದ್ದೇ ಸಿಟ್ಟು ಆಕ್ರೋಶ, ದುಃಖ ಎಲ್ಲ ಒಟ್ಟೊಟ್ಟಿಗೇ ನುಗ್ಗತೊಡಗಿದವು. ದಬದಬನೇ ನೀರು ಸುರಿದುಕೊಂಡು ಬಾಗಿಲ ತೆರೆದು ಹೊರಬಂದ. ತಾನು ದುರುಗುಟ್ಟಿಕೊಂಡು ನೋಡುತ್ತಿದ್ದರೂ ಅಚ್ಯುತ ಆರಾಮವಾಗಿಯೇ ಟಾಯ್ಲೆಟ್ ಹೊಕ್ಕು ಬಾಗಿಲ ಜಡಿದುಕೊಂಡು ಸಣ್ಣಗೆ ‘ಯಾರೇ ಕೂಗಾಡಲಿ, ಊರೇ ಹೋರಾಡಲಿ...’ ಎಂದು ಗುನುಗತೊಡಗಿದಾಗ ಸದಾನ ಸಿಟ್ಟೆಲ್ಲ ಸರ್ರನೇ ಮೇಲೇರಿ ಮುಖ ಕೆಂಪಗಾಯಿತು. ಬಲಗಾಲೆತ್ತಿ ಟಾಯ್ಲೆಟ್ಟಿನ ಬಾಗಿಲಿಗೆ ಜಾಡಿಸಿ ಒದ್ದುಬಿಡಬೇಕು ಎಂಬ ಕ್ರೋಧವನ್ನು ಕಷ್ಟಪಟ್ಟು ಹತ್ತಿಕ್ಕಿ ರೂಮಿನೊಳಗೆ ಬಂದು ಕುಸಿದು ಕೂತ. ಕಿವಿಯ ಬಿಸಿಯಿನ್ನೂ ಆರಿರಲಿಲ್ಲ.

ಎದುರಿನ ಕಿಟಕಿಯಲ್ಲಿ ಚಾರ್ಜಿಗೆ ಹಾಕಿಟ್ಟಿದ್ದ ಮೊಬೈಲು ಕಂಡಿದ್ದೇ ಮನೆಯ ನೆನಪಾಗಿ ಸಿಟ್ಟೆಲ್ಲ ಅತ್ತಲೇ ತಿರುಗಿತು. ‘ಅಪ್ಪಾ ನಂಗಿದೆಲ್ಲ ಆಗೂದಿಲ್ಲ... ನಾನು ಮನೆಗೇ ಬಂದುಬಿಡ್ತೇನೆ’ ಎಂದು ಖಂಡತುಂಡವಾಗಿ ಹೇಳಿಬಿಡಬೇಕು ಎಂದು ಫೋನೆತ್ತಿಕೊಂಡು ಮನೆಯ ನಂಬರುಗಳನ್ನು ಸ್ಪರ್ಶಿಸಿದ.





ಎಸ್.ವಿ. ಹೂಗಾರ